## ನನ್ನ ಓದು

ಸುಶಿಕ್ಷಿತ ಎನ್ನಬಹುದಾದ ಕೌಟುಂಬಿಕ ಹಿನ್ನೆಲೆ ಅವರಿಗಿರದಿದ್ದರೂ, ಅವರು ಸ್ವಶಿಕ್ಷಿತರು. ಇಬ್ಬರದೂ ಗುರಿ ಒಂದೇ. ಆದರೆ ಅವರಿಬ್ಬರ ಮನಸ್ಥಿತಿಯಲ್ಲಿ ಕುತೂಹಲಕಾರಿ ವ್ಯತ್ಯಾಸವನ್ನು ಕಾಣುತ್ತೇವೆ. ಇಬ್ಬರೂ ಪೂರ್ತಿ ಮನಸ್ಸಿನಿಂದ ಸ್ವಯಂಸ್ಫೂರ್ತಿಯಿಂದ ಹೋರಾಟಕ್ಕೆ ಧುಮುಕಿದ್ದಾರೆ. ಇಬ್ಬರಿಗೂ ಯಾವುದೇ ತರಹದ ವೈಯಕ್ತಿಕ ಮಹತ್ವಾಕಾಂಕ್ಷೆಗಳಿಲ್ಲ. ತಮ್ಮ ನೆಲದ ವಿಮೋಚನೆಗಾಗಿ ನಿಸ್ವಾರ್ಥ ಹೋರಾಟ ಒಂದೇ ಅವರ ಗುರಿ.

ವಿಮೋಚನಾ ಚಳವಳಿಯ ಕಾವು ಹೆಚ್ಚಿದಂತೆ, ತಮ್ಮ ಕಣ್ಮುಂದೆಯೇ ತೀರಾ ಅನಿರೀಕ್ಷಿತವಾದ ದುರಂತಗಳು ಸಂಭವಿಸಲು ಆರಂಭವಾಗಲು, ಸಾವು ನೋವುಗಳು, ಅಮಾಯಕರ ಮೇಲೆ ಅತ್ಯಾಚಾರಗಳು ಇವರ ಬಾಗಿಲುಗಳನ್ನೇ ತಟ್ಟಲು, ಶಂಕರ ಸ್ವಲ್ಪ ವಿಚಲಿತನಾಗುತ್ತಾನೆ. ಈ ವಿಚಲತೆ ಆತನನ್ನು ಹೋರಾಟದಿಂದ ವಿಮುಖನನ್ನಾಗಿ ಮಾಡದು. ಇಷ್ಟು ದೊಡ್ಡ ಪ್ರಮಾಣದ ಸಾವುನೋವು ಸಂಭವಿಸುತ್ತಿರುವಾಗ, ಇದರಿಂದ ಸಿಗಬಹುದಾದ ವಿಮೋಚನೆಯ ಅರ್ಥವಾದರೂ ಏನು ಎಂಬ ಮೂಲಭೂತ ಪ್ರಶ್ನೆಯ ಮುಖಾಮುಖಿ ಆಗುವುದು. ವಿಮೋಚನೆಯ ಭಾಗ್ಯವನ್ನು ಭೋಗಿಸಿ ಆನಂದಿಸುವ ತಮ್ಮ ಜನರಾದರೂ ಯಾರು ಎಂಬ ಪ್ರಶ್ನೆ ಇದಿರಾಗಿ, ಇಂಥ ಹೋರಾಟಗಳ ಮೂಲ ಉದ್ದೇಶಗಳ ಬಗೆಗೆ ತನ್ನೊಡನೆ ತಾನೇ ಸಂಘರ್ಷಕ್ಕೆ ಇಳಿಯುತ್ತಾನೆ. ಈ ಪ್ರಮಾಣದ ಹೋರಾಟಗಳಲ್ಲಿ ಇಂಥ ಘಟನೆಗಳು ಅನಿವಾರ್ಯ, ಅಂತಿಮ ವಿಜಯವೊಂದೇ ತಮ್ಮ ಗುರಿಯಾಗಿರಬೇಕು ಎಂಬ ಸತ್ಯ ಮನದಟ್ಟಾಗುವುದರೊಂದಿಗೆ, ಶಂಕರನ ಮನಸ್ಸು ಹತೋಟಿಗೆ ಬರುತ್ತದೆ. ಒಂದು ಹಂತದಲ್ಲಿ ಶಂಕರ ತನಗೆ ಅತ್ಯಂತ ಪ್ರಿಯರಾದವರೆಲ್ಲರನ್ನೂ ಕಳೆದುಕೊಂಡು ದುಃಖತಪ್ತನಾಗುತ್ತಾನೆ. ಅತ್ತಿಗೆ, ರೋಷನಸಾಹೇಬರು, ಗೆಳೆಯ ಶೇಖರ – ಇವರ ಅಗಲಿಕೆಯನ್ನು ನೆನೆಸಿಕೊಂಡಾಗ ಸಂಕಟಪಡುತ್ತಾನೆ. ಆ ಸಂದರ್ಭದಲ್ಲಿ ಅವನ ಭಾವೀ ಪತ್ನಿ ಉಮಾ ಹೇಳುವ ಮಾತುಗಳು ಶಂಕರನಿಗಷ್ಟೇ ಅಲ್ಲ, ಎಲ್ಲ ಕಾಲಕ್ಕೂ ದೇಶಕ್ಕೂ ಸಲ್ಲತಕ್ಕವು. 'ಏನು ಮಾಡೋದು? ಗಟ್ಟಿ ಆಗಬೇಕು. ಅಗಲಿಕೆ ಸಹಿಸಿಕೋಬೇಕು. ಅವರ ಔದಾರ್ಯ, ಮಾನವೀಯತೆ, ಸ್ನೇಹ ಹಂಚೋಣ'. ಉಮಾಳ ಮಾತುಗಳು ಹೋರಾಟದ ನೋವುಗಳಿಗೆ ಮುಲಾಮು ಹಚ್ಚುವಂತಹವು. ಪ್ರತೀಕಾರದ ಭಾವನೆಗಳಿಗೆ ಲಗಾಮು ಹಾಕಿ ಮಾನವೀಯತೆಯನ್ನು ಮೆರೆಸುವವು.

ಇತಿಹಾಸವನ್ನು ಪುನರ್ ಸೃಷ್ಟಿ ಮಾಡುವ ಲೇಖಕ ಮಾಡಬೇಕಾದ ಮೊದಲ ಕೆಲಸ ಅಂದರೆ ಮಾನವೀಯತೆಯನ್ನು ಮೆರೆಯುವುದು. ಹಿರೇಮಠರು ಸೃಷ್ಟಿ ಮಾಡಿದ ಜಗತ್ತಿನಲ್ಲಿ ಪ್ರತೀಕಾರ, ದ್ವೇಷ ಮೆರೆಸಲು ಸಾಕಷ್ಟು ಸಾಧ್ಯತೆಗಳಿದ್ದರೂ ಹಾಗಾಗದು. ಒಬ್ಬ ಶ್ರೇಷ್ಠ ಲೇಖಕ ತುಂಬ ಪ್ರಜ್ಞಾಪೂರ್ವಕವಾಗಿ ಮಾನವೀಯ ಮೌಲ್ಯಗಳನ್ನು ತನ್ನ ಕಥಾನಕದ ಮೂಲಕ ಪ್ರತಿಪಾದಿಸುವನು. ಹಿರೇಮಠರು 'ಹಾವಳಿ'ಯಲ್ಲಿ ಮಾಡುವುದು ಇದನ್ನೇ.

ಶಂಕರನ ಜೀವದ ಗೆಳೆಯ ಶೇಖರ ಇನ್ನೊಬ್ಬ ಪ್ರಮುಖ ಹೋರಾಟಗಾರ. ಒಂದರ್ಥದಲ್ಲಿ ಆತ ಶಂಕರನಿಗಿಂತ ಗಟ್ಟಿ. ವಿಮೋಚನಾ ಹೋರಾಟಕ್ಕೆ ತನ್ನನ್ನು ತಾನು ಪೂರ್ತಿಯಾಗಿ ತೊಡಗಿಸಿಕೊಳ್ಳಬೇಕು ಎನ್ನುವುದೇ ಆತನ ಏಕಮೇವ ಗುರಿ. ಯಾವ ತ್ಯಾಗಕ್ಕೂ ಆತ ಸಿದ್ಧ. ಗಾಂಧೀಜಿಯವರ ಬ್ರಹ್ಮಚರ್ಯದ ಸಲಹೆಗಳನ್ನು ಆತ ಅಕ್ಷರಶಃ ಪಾಲಿಸುವವ. ಪ್ರಜ್ಞಾಪೂರ್ವಕವಾಗಿ ತನ್ನ ಪ್ರೀತಿಯ ಹೆಂಡತಿಯಿಂದ ದೂರ ಇದ್ದು ಹೋರಾಟದಲ್ಲಿ ಮುಳುಗಿಹೋಗುತ್ತಾನೆ. ಹೋರಾಟದ ಮುಂಚೂಣಿಯಲ್ಲಿ ಇದ್ದು ಹುತಾತ್ಮನಾಗುವನು. ಆತನ ವೈಯಕ್ತಿಕ ಆಕಾಂಕ್ಷೆಗಳು ಈಡೇರದ ಬಯಕೆಗಳಾಗುವವು. ಅವನ ಸಾವನ್ನು ಹೆಂಡತಿ ಗಂಗಾ ಹಾಗೂ ತಂದೆ ಕರಬಸಪ್ಪ ಸ್ವೀಕರಿಸುವ ರೀತಿ ಒಂದು ಅಪರೂಪದ ಸ್ಪಂದನ. ಬಸಾಪುರದಂತಹ ಚಿಕ್ಕ ಗ್ರಾಮದಲ್ಲೂ, ಸಾಮಾನ್ಯ ಜನರೂ ಮೆರೆಯುವ ಪ್ರಬುದ್ಧತೆ ಬೆರಗುಗೊಳಿಸುವಂತಹದು. ಶೇಖರನ ತಂದೆ ತನ್ನ ಜಮೀನಿನ ಒಂದು ಭಾಗವನ್ನು ತನ್ನ ಮಗನಂತೆ ಇದ್ದ ಶಂಕರನ ಹೆಸರಿಗೆ ಬರೆದು ಒಂದು ಅನಾಥಾಶ್ರಮವನ್ನು ತೆಗೆಯಲು ಅನುವು ಮಾಡಿಕೊಡುವನು. 'ಈ ಹಿಂಸಾತ್ಮಕ ಹೋರಾಟದಾಗ ಬಹಳಷ್ಟು ಕಷ್ಟ ಪಟ್ಟಿದ್ದೀವಿ, ನಾಶ ಹೊಂದಿದ್ದೀವಿ ನಾನಂತೂ ನನ್ನ ಮಗನ್ನ ಕಳಕೊಂಡೀನಿ... ಈಗ ಅವನ ಜಾಗೆಯಲ್ಲಿ ಶಂಕರ ಇದಾನೆ... ಅವನ ಹಂಬಲ ತಿಳಕೊಂಡು ನಾನು ಹೇಳ್ತಾ ಇದೀನಿ... ನನ್ನ ಆರು ಕೂರಿಗಿ ಹೊಲದಾಗ